Shekhar Ganagaluru's

SAFETY QUOTES - VOLUME 1

Shekhar Ganagaluru

HR & IR Professional | Author | Motivational Speaker
Storyteller | Mentor | Trainer | Social Worker

Pics courtesy: pixabay

Jan 15, 2023

1

“

ಪ್ರೀತಿಸೋಣ ಸುರಕ್ಷತೆಯ ಪರಿಸರವ,

ಬೆಳಸೋಣ ಸುರಕ್ಷತೆಯ ಸಂಸ್ಕೃತಿಯ,

ಗ್ರಹಿಸೋಣ ಸುರಕ್ಷತೆಯ ಮಾಹಿತಿಯ,

ಪ್ರಶ್ನಿಸೋಣ ಅಸುರಕ್ಷತೆಯ ವಿಧಾನವ,

ಭೋದಿಸೋಣ ಸುರಕ್ಷತೆಯ ಜ್ಞಾನವ,

ಪಾಲಿಸೋಣ ಸುರಕ್ಷತೆಯ ನೀತಿಯ,

ಬೆಳಗೋಣ ಸುರಕ್ಷತೆಯ ಜ್ಯೋತಿಯ,

ಇದುವೇ ನಮ್ಮ ಶಾಂತಿ, ಸಂತೋಷ ಮತ್ತು ಅಭಿವೃದ್ಧಿಯ ಬುನಾದಿ.

– ಶೇಖರ್ ಗಣಗಲೂರು

2

“

ನಾವು ನಾವಲ್ಲ,

ನಾವು ತಂದೆ-ತಾಯಿಯ ಕನಸು,

ನಾವು ಬಾಳಸಂಗಾತಿಯ ನಂಬಿಕೆ,

ನಾವು ಮಕ್ಕಳ ಭವಿಷ್ಯ,

ನಮ್ಮ ಸುರಕ್ಷತೆಯೇ, ನಮ್ಮವರ ಕನಸು, ನಂಬಿಕೆ ಮತ್ತು ಭವಿಷ್ಯದ ತಳಹದಿ.

– ಶೇಖರ್ ಗಣಗಲೂರು

“

ಅನಂತ ಆನಂದವನ್ನು ಆನಂದಿಸಲು
ಸುರಕ್ಷತೆಯ ಅನಂತ ವಿದ್ಯಾರ್ಥಿಯಾಗಿರಿ.

– ಶೇಖರ್ ಗಣಗಲೂರು

4

“

ಒಂದು ನಿಮಿಷದ ಅಸುರಕ್ಷತೆಯ ಇಷ್ಟ,

ಭವಿಷ್ಯದ ಹಲವಾರು ದಿನಗಳ ಕಷ್ಟ.

– ಶೇಖರ್ ಗಣಗಲೂರು

5

“

ಸುರಕ್ಷತಾ ಅಭ್ಯಾಸಗಳೊಂದಿಗೆ ಕಟ್ಟುನಿಟ್ಟಾಗಿರುವುದರಿಂದ
ಆ ಕ್ಷಣಗಳಲ್ಲಿ ನಿಮಗೆ ಕಷ್ಟವಾಗಬಹುದು,
ಆದರೆ ದೀರ್ಘಾವಧಿಯಲ್ಲಿ ನೀವು ದೈಹಿಕವಾಗಿ ಮತ್ತು ಮಾನಸಿಕವಾಗಿ
ಅತ್ಯುತ್ತಮವಾಗಿರುತ್ತೀರಿ.

– ಶೇಖರ್ ಗಣಗಲೂರು

6

“

ಸುರಕ್ಷಿತ ಮನೋಭಾವವು ನಮಗೆ ಮತ್ತು ನಮ್ಮವರಿಗೆ ಖರೀದಿಸಲಾಗದ ಅತ್ಯಂತ ದುಬಾರಿ ಉತ್ಪನ್ನವಾದ ನಗುವಿನ ಉಡುಗೊರೆ ನೀಡುತ್ತದೆ.

– ಶೇಖರ್ ಗಣಗಲೂರು

7

“

ತಂಡವನ್ನು
ಸುರಕ್ಷಿತವಾಗಿ ತಮ್ಮ ಅತ್ಯುತ್ತಮವಾದುದನ್ನು
ನೀಡಲು ನಿರಂತರವಾಗಿ ಪ್ರೇರೇಪಿಸುದೇ
ನಾಯಕತ್ವದ ಮುಖ್ಯ ಗುರಿ.

– ಶೇಖರ್ ಗಣಗಲೂರು

8

“

ಉತ್ತಮ ಫಲಿತಾಂಶಗಳನ್ನು ಸಾಧಿಸುವುದು ದೊಡ್ಡ ಸಾಧನೆಯಲ್ಲ.
ಆದರೆ ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ
ವಾತಾವರಣದೊಂದಿಗೆ ಉತ್ತಮ ಫಲಿತಾಂಶಗಳನ್ನು ಸಾಧಿಸುವುದು
ಅತ್ಯುತ್ತಮ ಸಾಧನೆ.

– ಶೇಖರ್ ಗಣಗಲೂರು

9

“

ಕಡಿಮೆ ಸಂಬಳದ ಕೆಲಸದಿಂದ ದೂರವಿರಲು ಯೋಚಿಸಬೇಡಿ.

ಆದರೆ ಕಳಪೆ ಸುರಕ್ಷತಾ ಪರಿಸರದ ಕೆಲಸದಿಂದ ಎಂದೆಂದಿಗೂ ದೂರವಿರಿ.

– ಶೇಖರ್ ಗಣಗಲೂರು

“

ನಡವಳಿಕೆ

ಸುರಕ್ಷತೆಯ ಅತ್ಯಂತ ಶಕ್ತಿಶಾಲಿ ಸಾಧನ.

– ಶೇಖರ್ ಗಣಗಲೂರು

11

“

ಸುರಕ್ಷತೆಯೊಂದಿಗೆ ಬಲವಾದ ಸಂಬಂಧವನ್ನು ಬೆಳೆಸಿಕೊಳ್ಳದಿದ್ದರೆ
ವಿಜಯವು ನಮ್ಮ ಸ್ನೇಹಿತನಾಗುವುದಿಲ್ಲ.
ದುರಂತಗಳ ರೂಪದಲ್ಲಿ ಅಸುರಕ್ಷಿತ ಕೆಲಸಗಳು ನಮ್ಮ ಸಾಮರ್ಥ್ಯಗಳನ್ನು
ಕಸಿದುಕೊಳ್ಳುತ್ತವೆ.
ಅಂತಿಮವಾಗಿ ನಮ್ಮ ಮತ್ತು ನಮ್ಮ ಪ್ರೀತಿಪಾತ್ರರ ಸಂತೋಷವನ್ನು ಹಾಳುಮಾಡುತ್ತವೆ.
ಕೇಂದ್ರೀಕೃತ ಸುರಕ್ಷತಾ ವಿಧಾನ ಮತ್ತು ಅಭ್ಯಾಸಗಳು
ಸುಂದರವಾದ ಮತ್ತು ಅರ್ಥಪೂರ್ಣ ಜೀವನವನ್ನು ನಡೆಸಲು
ನಮ್ಮನ್ನು ಶಿಸ್ತುಬದ್ಧವಾಗಿಸುತ್ತದೆ.

– ಶೇಖರ್ ಗಣಗಲೂರು

12

“

ಉತ್ತಮ ಉದ್ಯೋಗಿಗಳು ತಮ್ಮ ಕೆಲಸವನ್ನು ಮಾತ್ರ ಪೂರ್ಣಗೊಳಿಸುವುದಿಲ್ಲ, ಅವರು ತಮಗಾಗಿ ಮತ್ತು ತಮ್ಮವರಿಗಾಗಿ ಉತ್ತಮವಾದ ಸುರಕ್ಷಿತ ಕೆಲಸದ ಸಂಸ್ಕೃತಿಯನ್ನು ಸೃಷ್ಟಿಸಲು ತಮ್ಮನ್ನು ತಾವು ಸಮರ್ಪಿಸಿಕೊಳ್ಳುತ್ತಾರೆ.

– ಶೇಖರ್ ಗಣಗಲೂರು

13

“

ಸಾಮಾನ್ಯ ಮತ್ತು ಅಸಾಧಾರಣ ಉದ್ಯೋಗಿಗಳ ನಡುವಿನ ವ್ಯತ್ಯಾಸವೆಂದರೆ;
ಸಾಮಾನ್ಯ ವ್ಯಕ್ತಿ ಸುರಕ್ಷಿತ ಪರಿಸರದಲ್ಲಿ ಅಸುರಕ್ಷಿತ ವಾತಾವರಣವನ್ನು ಸೃಷ್ಟಿಸಿದರೆ,
ಅಸಾಮಾನ್ಯ ವ್ಯಕ್ತಿ ಅಸುರಕ್ಷಿತ ಪರಿಸರದಲ್ಲಿ ಸುರಕ್ಷಿತ ವಾತಾವರಣವನ್ನು ಸೃಷ್ಟಿಸುತ್ತಾನೆ.

– ಶೇಖರ್ ಗಣಗಲೂರು

14

“

ಪ್ರತಿಯೊಬ್ಬರೂ ಯಶಸ್ಸನ್ನು ಬಯಸುತ್ತಾರೆ.

ಆದರೆ, ದುರದೃಷ್ಟವಶಾತ್ ಕೆಲವೇ ಜನರು ಅಪೇಕ್ಷಿತ ಯಶಸ್ಸನ್ನು ಸಾಧಿಸುತ್ತಾರೆ.

ಏಕೆಂದರೆ ಅವರು ಯಶಸ್ಸಿನ ನಿಜವಾದ ಉದ್ದೇಶವಾದ ಸುರಕ್ಷತೆ ಮತ್ತು ಆರೋಗ್ಯವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ವ್ಯವಹರಿಸುತ್ತಾರೆ.

– ಶೇಖರ್ ಗಣಗಲೂರು

15

“

ನಾನು ಉತ್ತಮ ನಾಯಕನಾಗಿರಲಿಲ್ಲ.

ಆದರೆ, ಕೆಲಸದ ಸ್ಥಳದಲ್ಲಿನ ಸುರಕ್ಷತೆಯ ದೃಷ್ಟಿಕೋನವು

ಅವರ ಕುಟುಂಬಗಳಿಗೆ ಮುಖ್ಯವೆಂದು ನಾನು ಅವರಿಗೆ ಅರ್ಥಮಾಡಿಸಿದಾಗ

ಅವರೇ ನನ್ನನ್ನು ಉತ್ತಮ ನಾಯಕನನ್ನಾಗಿ ಮಾಡಿದರು.

– ಶೇಖರ್ ಗಣಗಲೂರು

16

“

ಸುರಕ್ಷಿತ ಮನೋಭಾವವು

ಸುರಕ್ಷಿತ ಮನೋಭಾವವನ್ನು ಉತ್ತೇಜಿಸುತ್ತದೆ.

– ಶೇಖರ್ ಗಣಗಲೂರು

“

ನಾನು ಸುರಕ್ಷತೆಯಲ್ಲಿ ಪರಿಣಿತನಲ್ಲ.

ಆದರೆ,

ನಿರಂತರ ಕಲಿಕೆಯಲ್ಲಿ ನಾನು ಪ್ರಾಮಾಣಿಕ.

– ಶೇಖರ್ ಗಣಗಲೂರು

18

“

ನಿಮ್ಮ ಸುರಕ್ಷತೆಯೊಂದಿಗೆ ನೀವು ನಿಮ್ಮನ್ನು ಜಯಿಸಬಹುದು.

ನಿಮ್ಮ ತಂಡದ ಸುರಕ್ಷತೆಯೊಂದಿಗೆ ನೀವು ಇಡೀ ಜಗತ್ತನ್ನು ಗೆಲ್ಲಬಹುದು.

– ಶೇಖರ್ ಗಣಗಲೂರು

19

“

ಇತರರ ಸುರಕ್ಷತೆಯು

ನಿಮ್ಮ ಸುರಕ್ಷತೆಯ ಮೂಲವೆಂದು ನೀವು ಅರ್ಥಮಾಡಿಕೊಂಡು ಮುನ್ನಡೆದಾಗ,

ನಿಮ್ಮ ಅಹಂ ದೂರವಾಗಿ ನೆಮ್ಮದಿ ತಾನಾಗಿಯೇ ಹತ್ತಿರವಾಗುತ್ತದೆ.

– ಶೇಖರ್ ಗಣಗಲೂರು


20
“
ಸುರಕ್ಷತೆ
ಭವಿಷ್ಯದ ದಿಕ್ಸೂಚಿ.
– ಶೇಖರ್ ಗಣಗಲೂರು
BE GREAT

21

“

ತಿಂಗಳ ಕೊನೆಯಲ್ಲಿ ಸಂಬಳ ಮುಖ್ಯ,

ಆದರೆ ಪ್ರತಿ ಕ್ಷಣ ಸುರುಕ್ಷತೆ ಬಹುಮುಖ್ಯ.

– ಶೇಖರ್ ಗಣಗಲೂರು

22

“

ಸುರಕ್ಷತೆಯ ನೀತಿ-ನಿಯಮಗಳ ಮೇಲಿನ ತಣ್ಣೇರು ಜೀವನದ ರಕ್ತಕಣ್ಣೇರು.

– ಶೇಖರ್ ಗಣಗಲೂರು



23

“

ಸುರಕ್ಷಿತ ಕೆಲಸದ ಸ್ಥಳವು ಸ್ವರ್ಗಕ್ಕೆ ಸಮಾನ.

– ಶೇಖರ್ ಗಣಗಲೂರು

24

“

ಉದ್ಯೋಗಿಗಳ ಸುರಕ್ಷತೆ ಮತ್ತು ಆರೋಗ್ಯ ವರ್ಧನೆಯಲ್ಲಿ ಹೂಡಿಕೆ ಪ್ರಧಾನ. ಏಕೆಂದರೆ ಕೆಟ್ಟ ಸುರಕ್ಷತಾ ಸಂಸ್ಕೃತಿಯು ಒಳ್ಳೆಯ ವ್ಯಾಪಾರವನ್ನು ಕೆಟ್ಟದಾಗಿ ಪರಿವರ್ತಿಸಬಹುದು ಮತ್ತು ಉತ್ತಮ ಸುರಕ್ಷತಾ ಸಂಸ್ಕೃತಿಯು ಕೆಟ್ಟವ್ಯಾಪಾರವನ್ನು ಉತ್ತಮಗೊಳಿಸಬಹುದು.

– ಶೇಖರ್ ಗಣಗಲೂರು

25

“

ಉದ್ಯೋಗಿಗಳು ಕೆಲಸದ ಸಂಸ್ಕೃತಿಯೊಂದಿಗೆ ಸುರಕ್ಷಿತವಾಗಿ
ಜೀವಿಸಲು ಪ್ರಾರಂಭಿಸಿದಾಗ,
ಉಳಿದೆಲ್ಲವೂ ಯೋಜಿಸಿದಂತೆ ಸುಗಮವಾಗುತ್ತದೆ.

– ಶೇಖರ್ ಗಣಗಲೂರು

26

“

ಅಜಾಗರೂಕತೆಯಿಂದ ಅಲ್ಲ

ಸುರಕ್ಷಿತವಾಗಿ ಕೆಲಸ ಮಾಡಲು ಕಲಿಯಿರಿ ಮತ್ತು ಬೆಳೆಯಿರಿ

– ಶೇಖರ್ ಗಣಗಲೂರು

27

“

ನಿಮ್ಮ ಅಹಿತಕರ ಪರಿಸ್ಥಿತಿಯಲ್ಲಿ,
ನೀವು ಹೇಗೆ ಇತರರನ್ನು
ಸುರಕ್ಷಿತವಾಗಿಸುತ್ತೀರಿ ಎಂಬುದು ನಿಮ್ಮ
ವ್ಯಕ್ತಿತ್ವದ ಶ್ರೇಷ್ಠತೆಯನ್ನು ನಿರ್ಧರಿಸುತ್ತದೆ.

– ಶೇಖರ್ ಗಣಗಲೂರು

28

“

ಅವರ ಸಂಕಷ್ಟಗಳನ್ನು ಮರೆತು, ನಿಮ್ಮ ಸಂಕಷ್ಟಗಳನ್ನು ಮೌನವಾಗಿ ಅರ್ಥಮಾಡಿಕೊಂಡು,
ನಾನಿರುವೆ ನಿಮಗಾಗಿ ಎಂಬ ವಿಶ್ವಾಸವನ್ನು ನೀಡುವವನೇ ಉದ್ಯೋಗದಾತ.

– ಶೇಖರ್ ಗಣಗಲೂರು

29

“

ಕಾರ್ಮಿಕ

ಕುಟುಂಬ ಮತ್ತು ಕಾರ್ಖಾನೆಯ

ಪ್ರಾಮಾಣಿಕ ಸೈನಿಕ.

– ಶೇಖರ್ ಗಣಗಲೂರು

30

“

ನೀವು ನಿನ್ನೆ ಮಹೋನ್ನತವಾಗಿ ಕೆಲಸ ಮಾಡಿರಬಹುದು,
ಇಂದು ಅತ್ಯುತ್ತಮವಾಗಿ ಕೆಲಸ ಮಾಡುತ್ತಿರಬಹುದು.
ಆದರೆ ನಾಳೆ ನೀವು ಮಾಡುವ ಕೆಲಸ
ನಿನ್ನೆ ಮತ್ತು ಇಂದಿಗಿಂತ ಉತ್ತಮವಾಗಿರಬೇಕು,
ಅದಕ್ಕಾಗಿ ನೀವು ಸುರಕ್ಷಿತ ಮತ್ತು ಆರೋಗ್ಯಕರವಾಗಿರಬೇಕು.

– ಶೇಖರ್ ಗಣಗಲೂರು

31

“

ನಿಮ್ಮ ಕುಟುಂಬ ಮತ್ತು ಅವರ ಬೆಳವಣಿಗೆಗೆ ಬೇರೆ ಯಾರೂ ಜವಾಬ್ದಾರರಲ್ಲ.

ಇದು ನಿಮ್ಮ ಜವಾಬ್ದಾರಿ ಮತ್ತು ನೀವೇ ಅದಕ್ಕೆ ಹೊಣೆಗಾರರು.

ಈ ಹೊಣೆಗಾರಿಕೆಯನ್ನು ಪೂರೈಸಲು ನೀವು ಸುರಕ್ಷಿತ ಮತ್ತು ಆರೋಗ್ಯಕರವಾಗಿರಬೇಕು.

– ಶೇಖರ್ ಗಣಗಲೂರು

32

“

ನೀವು ಇಲ್ಲಿಯವರೆಗೆ ಮಾಡದ ಕೆಲಸವನ್ನು ಮಾಡಲು ಸಹಾಯ ಮಾಡುವ ದಿನ ಈ ದಿನ...

ನೀವು ಏನು ಮತ್ತು ನೀವು ಏನು ಮಾಡಬಹುದು ಎಂಬುದನ್ನು ಅರಿತುಕೊಳ್ಳುವ ದಿನ ಈ ದಿನ...

ಉತ್ತಮ ಭವಿಷ್ಯಕ್ಕಾಗಿ ಬಲವಾದ ಅಡಿಪಾಯವನ್ನು ಹಾಕಲು ನಿಮಗೆ ಅನುವು ಮಾಡಿಕೊಡುವ ದಿನ ಈ ದಿನ...

ನೀವು ಇಲ್ಲಿಯವರೆಗೆ ಕಾಯುತ್ತಿರುವ ದಿನ ಈ ದಿನ; ಎಚ್ಚೆತ್ತುಕೊಳ್ಳಿ, ಕಾರ್ಯನಿರ್ವಹಿಸಿ, ಬಳಸಿಕೊಳ್ಳಿ ಮತ್ತು ಈ ದಿನವನ್ನುಸುರಕ್ಷಿತವಾಗಿ ಮಹತ್ವಪೂರ್ಣಗೊಳಿಸಿ...

– ಶೇಖರ್ ಗಣಗಲೂರು


"ನೈಜ ಘಟನೆಗಳ ಆಧಾರಿತ ವ್ಯಕ್ತಿತ್ವ ವಿಕಸನದ ಕೃತಿ"
ಬದುಕು
ಬದಲಾಯಿಸಿದ
ಕಥನಗಳು
ಶೇಖರ್ ಗಣಗಲೂರು
NIRUTA Publications


ಗೆಲುವು
ಗೆದ್ದೇ ಗೆಲ್ಲಿಸುವ ರಹಸ್ಯಗಳ ಕೈಪಿಡಿ
ಹತ್ತು ವ್ಯಕ್ತಿತ್ವ ಒಂದಿಗೆ ಈ ನಿಮ್ಮ ಪಯಣ
ಶೇಖರ್ ಗಣಗಲೂರು
NIRUTA Publications


365
QUOTES
that will
CHANGE
the way
YOU
LIVE
and
LIGHT
Daily Motivational Capsules
Shekhar Ganagaluru
A Time to Gift and Enrich

LEADERS TALK
An Initiative of Niruta Publications
NIRUTA
Publications
EDITORS
Shekhar Ganagaluru | Dr. Kempegowda B.K. | Prakasha R.M.
Jayaram Ramaiah | Ramesha M.H.

Contact for the Books of Shekhar Ganagaluru

Niruta Publications

No, 326, 2nd Floor, Opp. Canara Bank,

Near Dr. AIT College, Mallathahalli, Bangalore - 560056.

Ph: 080-23213710, 8073067542

Email: nirutapublications@gmail.com

Website: www.nirutapublications.org

Shekhar Ganagaluru

Mobile: 96327 11228

Email: shekhargn1@gmail.com